ಹೋದೆ. ಅವಳು ಕೈಯಲ್ಲಿದ್ದ ಟೆಡ್ಡಿ ಬೇರ್ ಜೊತೆ ಆಡುತ್ತಾ, 'ಅಮ್ಮಾ ನನ್ನ ಟೆಡ್ಡಿನ ಚೆನ್ನಾಗಿ ನೋಡಿಕೊಂಡ್ಯಾ?' ಅಂತ ಕೇಳಿದಳು. ಪ್ರತಿನಿತ್ಯ, 'ಹೌದು ಪುಟ್ಟಿ ಅದಕ್ಕೆ ಹಾಲು ಕುಡಿಸಿದೆ, ತಿಂಡಿ ತಿನ್ನಿಸಿ ಮಲಗಿಸಿದ್ದೆ... ಅರ್ಪಿ ಎಷ್ಟು ಹೊತ್ತಿಗೆ ಬರುತ್ತಾಳೆ ಅಂತ ಕೇಳಿತು...' ಅಂತೆಲ್ಲಾ ಉಡಾಫೆ ಬಿಡುತ್ತಾ ಮಾತಾಡುತ್ತಿದ್ದವಳು ನಾನು. ಇವತ್ತು ನನಗೇ ಮೂಡ್ ಇಲ್ಲ. 'ಬೇಗ ಬಾ ಅರ್ಪಿ... ತಿಂಡಿ ತಿನ್ನು... ಹೊತ್ತಾಗುತ್ತೆ' ಅಂದೆ. ಓಡಿ ಬಂದು ಟೇಬಲ್ ಮುಂದೆ ಕುಳಿತು, 'ಏನು ಮಾಡಿದ್ದೀಯ?' ಅಂತ ಕೇಳುತ್ತಾ ಶಾವಿಗೆ ನೋಡಿ ಮುಖ ಸಿಂಡರಿಸಿದಳು. 'ಶಾವಿಗೇನಾ... ಹೋಗು ಮಮ್ಮಿ...' ಅಂದಳು. 'ಈಗ ತಿನ್ನು ಪುಟ್ಟಿ ಸುಮ್ಮನೆ ರಗಳೆ ತೆಗೀಬೇಡ' ಅನ್ನುತ್ತ ರೇಗಿ ಅವಳ ಮುಂದೆ ತಟ್ಟೆ ಇಟ್ಟೆ. 'ನೂಡಲ್ಸ್ ಆದರೂ ಮಾಡಬಹುದಿತ್ತು...' ಗೊಣಗುತ್ತಲೇ ಬಾಯಿಗಿಟ್ಟಳು. 'ಇದನ್ನೇನು ಹಿಟ್ಟು ಅನ್ನಲ್ಲ... ಇದೂ ನೂಡಲ್ಸೇ... ಬಾಯಿ ಮುಚ್ಚಿಕೊಂಡು ತಿನ್ನು' ರೇಗಿದೆ. ಅಷ್ಟರಲ್ಲಿ ಇವರ ಫೋನ್ 'ಮಗಳು ಮನೆಗೆ ಬಂದಳೇ?' ವಿಚಾರಿಸಿದರು. 'ಅಷ್ಟು ಹೊತ್ತಿನಿಂದ ಫೋನ್ ಮಾಡ್ತ ಇದ್ದೀನಿ... ಸ್ವಿಚ್ ಆಫ್ ಅಂತನೇ ಬರ್ತಿದೆ. ಏನು ಮಾಡಬೇಕು ನಾನು...' ಕೂಗಾಡಿದೆ ಇವರ ಜೊತೆ. 'ಏನಾಯ್ತು... ನಾನು ಮೀಟಿಂಗ್‌ನಲ್ಲಿದ್ದೆ. ಹೇಳು... ಏನು ಅಂತ' ಅಂದರು. 'ಶೇಷಜ್ಜಿಗೆ ಹುಷಾರಿಲ್ಲವಂತೆ. ಅತ್ತಿಗೆ ಫೋನ್ ಮಾಡಿದ್ರು' ಬಿಕ್ಕಿದೆ. 'ಹೌದಾ!!... ಹುಂ...' ಮೌನ. 'ಸರಿ... ಈಗಲೇ ಏರ್ ಟಿಕೆಟ್ ಬುಕ್ ಮಾಡ್ತೀನಿ. ನೀನು ಅರ್ಪಿ ಜೊತೆ ಹೊರಡು. ನಾನು ಸ್ವಲ್ಪ ಕೆಲಸ ಮುಗಿಸಿ ನಾಳೆ ಅಥವಾ ನಾಡಿದ್ದು ಬರ್ತೀನಿ. ...ವರಿ ಮಾಡಬೇಡ. ಏನೂ ಆಗಲ್ಲ. ರೆಡಿ ಆಗಿ ಏರ್‌ಪೋರ್ಟಿಗೆ ಬಾ. ನಾನು ಟ್ಯಾಕ್ಸಿ ಕಳಿಸ್ತೀನಿ' ಅಂದು ಫೋನ್ ಇಟ್ಟರು.

'ಅಮ್ಮಾ ನನ್ನ ಸ್ಕೂಲ್ ಡೇ ಡ್ಯಾನ್ಸ್‌ಗೆ ಸೆಲೆಕ್ಟ್ ಮಾಡಿದ್ದಾರೆ. ನಾಳೆಯಿಂದ ದಿನಾ ಪ್ರಾಕ್ಟಿಸ್‌ಗೆ ಹೋಗಬೇಕಂತೆ' ಕಾಲು ಅಲ್ಲಾಡಿಸುತ್ತಾ ಪುಟ್ಟಿ ಹೇಳಿದಳು.

'ಅರ್ಪಿ ಪುಟ್ಟ... ನಾವು ಈಗಲೇ ಬೆಂಗಳೂರಿಗೆ ಹೋಗ್ತ ಇದ್ದೀವಿ ಕಣೆ. ಏಳು ಗಂಟೆಗೆ ಫ್ಲೈಟ್ ಇದೆ. ರೆಡಿ ಆಗು. ಬೇಗ ಏಳು. ಈಗ ಟ್ಯಾಕ್ಸಿ ಬರುತ್ತೆ. ಕ್ವಿಕ್' ಅಂದೆ.

'ಮತ್ತೆ ನನ್ನ ಸ್ಕೂಲ್ ಡೇ...' ಅಂದಳು ಪೆಚ್ಚಾಗಿ.

'ಅದು ಆಮೇಲೆ ರಾಣಿ... ಮೊದಲು ನಾವು ಹೊರಡಬೇಕು. ಶೇಷಜ್ಜಿಗೆ ತುಂಬಾ ಹುಷಾರಿಲ್ಲವಂತೆ ಪುಟ್ಟೀ...' ಬಟ್ಟೆಗಳನ್ನು ಸೂಟ್ ಕೇಸಿಗೆ ಹಾಕಿ ಲಾಕ್ ಮಾಡುತ್ತ... ನೀರಿನ ಬಾಟಲ್ ಅವಳಿಗೆಂತ ಬಿಸ್ಕೆಟ್ ಪ್ಯಾಕೆಟ್... ಹೀಗೆ ಸಿಕ್ಕಿದ್ದನ್ನೆಲ್ಲ ಬ್ಯಾಗ್‌ಗೆ ಹಾಕುತ್ತಲೇ ಹೇಳಿದೆ.

'ಅವರಿಗೆ ಹುಶಾರಿಲ್ಲ ಅಂದ್ರೆ ಅಜ್ಜಿ ನೋಡಿಕೋತಾರೆ. ನನ್ನ ಡ್ಯಾನ್ಸ್‌ನಿಂದ ತೆಗೆದು ಬಿಡ್ತಾರೆ ನಾಳೆ ನಾನು ಸ್ಕೂಲ್‌ಗೆ ಹೋಗಲೇಬೇಕು...' ಅವಳಿಗೆ ಏಳಲು ಇಷ್ಟವೇ ಇರಲಿಲ್ಲ.

'ಬೇಗ ಪುಟ್ಟೀ... ನಿನ್ನಜ್ಜಿ ನೋಡಿಕೊಂಡಿದ್ದರೆ ನಾವ್ಯಾಕೆ ಅಳಬೇಕು...' ಸಿಡುಕುತ್ತಲೇ ಕಪಾಟಿನಿಂದ ದುಡ್ಡು ತೆಗೆದು ಪರ್ಸಿಗೆ ತುರುಕಿದೆ. ಅಷ್ಟರಲ್ಲೇ ಟ್ಯಾಕ್ಸಿ ಹಾರ್ನ್ ಕೇಳಿಸಿತು. ಗೊಣಗಾಡುತ್ತಿದ್ದ ಮಗಳನ್ನೂ ಎಳೆದುಕೊಂಡು ಲಗೇಜ್ ತೆಗೆದುಕೊಂಡು ಮನೆ ಬೀಗ ಹಾಕಿದೆ. ಇದಿರುಮನೆ ಸೇಠಾಣಿ ಬಾಗಿಲು ತೆಗೆದು ನಿಂತಿದ್ದಳು. 'ಕಹೀಂ ಜಾ ರಹೇ ಹೈ ಕ್ಯಾ?' ಅಂದಳು ಬ್ಯಾಗ್ ನೋಡಿ. 'ಹಾಂ... ಬಾಂಗಲೂರ್ ಜಾ ರಹಿ ಹೂಂ... ಮೇರೀ ನಾನೀ ಕಿ ತಬಿಯತ್ ಠೀಕ್ ನಹೀಂ' ಅಂದು ಕೆಳಗೆ ಹೊರಟೆ. 'ಭಗವಾನ್ ಕ ನಾಂ ಲೋ ಬೆಹೆನ್... ಸಬ್ ಠೀಕ್ ಹೋತ ಹೈ' ಅಂದಳು. ಅಷ್ಟರಲ್ಲಿ ನಾನು ಒಂದು ಮಹಡಿ ಇಳಿದು ಎರಡನೆಯದನ್ನು ಇಳಿಯುತ್ತಿದ್ದೆ. ಟ್ಯಾಕ್ಸಿಯವನು ಮೇಲೆ ಹತ್ತಿ ಬರುತ್ತಿದ್ದ. ಅವನ ಕೈಗೆ ಲಗೇಜ್ ಕೊಟ್ಟು 'ಜಲ್ದೀ